KACM200002112021

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಕಡೂರು, ಚಿಕ್ಕಮಗಳೂರು ಜಿಲ್ಲೆ.

## ಅಸಲು ದಾವಾ ಸಂಖ್ಯೆಃ 74/2021

ದಿನಾಂಕಃ 29 ನೇ ನವಂಬರ್ - 2023.

ವಾದಿಯರು ಃ 1. ಆರ್. ಜವರತ್ನೇಗೌಡ
ತಂದೆಃ ಎಸ್ . ಡಿ. ರಾಮಣ್ಣ,
ವಯಸ್ಸುಃ ಸುಮಾರು 42 ವರ್ಷ,
ವ್ಯಾಪಾರಿ, ವಾಸಃ ಕಾಳಿದಾಸ ನಗರ ,
ಚಿಕ್ಕಮಗಳೂರು ಟೌನ್ ಮತ್ತು ಅಂಚೆ
ಚಿಕ್ಕಮಗಳೂರು ಜಿಲ್ಲೆ .
(ವಾದಿಯ ಪರವಾಗಿಃ ಶ್ರೀ ಎಸ್.ಎನ್. ಗಿರೀಶ್ ., ವಕೀಲರು)

- ವಿರುದ್ಧ -

ಪ್ರತಿವಾದಿಯರು ಃ 1. ಶ್ರೀಮತಿ. ಜಯಮ್ಮ,
ತಂದೆಃ ಲೇಟ್ ಎಸ್ . ಡಿ. ರಂಗಪ್ಪ,
ವಯಸ್ಸುಃ ಸುಮಾರು 60 ವರ್ಷ,
ವ್ಯವಸಾಯ,

2. ಶ್ರೀ. ಎಸ್ . ಆರ್ . ಅಜ್ಜಯ್ಯ,
ತಂದೆಃ ಲೇಟ್ ಎಸ್ . ಡಿ. ರಂಗಪ್ಪ
ವಯಸ್ಸುಃ ಸುಮಾರು 31 ವರ್ಷ,
ವ್ಯವಸಾಯ,

3. ಶ್ರೀಮತಿ. ಸಾವಿತ್ರಿ ,
ಕೋಂ ಸುರೇಶ್ ,
ತಂದೆಃ ಎಸ್. ಡಿ. ರಂಗಪ್ಪ ,
ವಯಸ್ಸುಃ ಸುಮಾರು 35 ವರ್ಷ,
ಗೃಹಿಣಿ,

ಪ್ರತಿವಾದಿ 1 ರಿಂದ 3 ರವರ
ವಾಸಃ ಪೆಟ್ರೋಲ್ ಬ್ಯಾಂಕ್ ಹಿಂಭಾಗ,
ಸಖರಾಯಪಟ್ಟಣ ಗ್ರಾಮ ಮತ್ತು ಅಂಚೆ,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

4. ಶ್ರೀ ಮಂಜೇಗೌಡ ,
ತಂದೆಃ ಲೇಟ್ ಎಸ್.ಡಿ. ನಿಂಗಪ್ಪ ,
ವಯಸ್ಸುಃ ಸುಮಾರು 50 ವರ್ಷ,
ವ್ಯವಸಾಯ, ವಾಸಃ ವೀರಾಪುರ ಗ್ರಾಮ,
ಆಂದಲೇ ಅಂಚೆ, ಮಾದಿಹಳ್ಳಿ ಹೋಬಳಿ,
ಬೇಲೂರು ತಾಲ್ಲೂಕು , ಹಾಸನ ಜಿಲ್ಲೆ.

5. ಶ್ರೀಮತಿ. ರಾಧಾ ,
ಕೋಂ ಮೋಗಣ್ಣಗೌಡ,
ವಯಸ್ಸುಃ ಸುಮಾರು 40 ವರ್ಷ,
ಮನೆಗೆಲಸ, ವಾಸಃ
ತಟ್ಟೇಹಳ್ಳಿ ಗ್ರಾಮ,
ಗೋಣಿಕಾಮೇನಹಳ್ಳಿ ಅಂಚೆ,
ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ .

6. ಶ್ರೀಮತಿ. ಭಾಗ್ಯಮ್ಮ,
ಕೋಂ ಲೇಟ್ ರಾಮಣ್ಣ,
ವಯಸ್ಸುಃ ಸುಮಾರು 70 ವರ್ಷ,
ಮನೆಗೆಲಸ,

7. ಶ್ರೀಮತಿ ಮೀನಾಕ್ಷಿ,
ತಂದೆಃ ಲೇಟ್ ರಾಮಣ್ಣ,
ವಯಸ್ಸುಃ ಸುಮಾರು 32 ವರ್ಷ,
ಮನೆಗೆಲಸ,

8. ಶ್ರೀಮತಿ ಮಂಜುಳ,
ತಂದೆಃ ಲೇಟ್ ರಾಮಣ್ಣ,
ವಯಸ್ಸುಃ ಸುಮಾರು 27 ವರ್ಷ,
ಮನೆಗೆಲಸ,

9. ಶ್ರೀ ನಾಗರಾಜ,
ತಂದೆಃ ಲೇಟ್ ರಾಮಣ್ಣ,
ವಯಸ್ಸುಃ ಸುಮಾರು 25 ವರ್ಷ,
ವ್ಯವಸಾಯ,

ಪ್ರತಿವಾದಿ 6 ರಿಂದ 9 ರವರ
ವಾಸಃ ಕಾಳಿದಾಸ ನಗರ,
ಚಿಕ್ಕಮಗಳೂರುಟೌನ್ ಮತ್ತು ಅಂಚೆ,
ಚಿಕ್ಕಮಗಳೂರು ಜಿಲ್ಲೆ.

10. ಶ್ರೀ. ಕೆ. ಎಮ್ ,ಬಸಪ್ಪ ,
ತಂದೆಃ ಲೇಟ್ ಮರುಳಸಿದ್ದಪ್ಪ,
ವಯಸ್ಸುಃ ಸುಮಾರು 59 ವರ್ಷ,
ವ್ಯವಸಾಯ, ವಾಸಃ ಕಂಚುಗಾರನಹಳ್ಳಿ
ಗ್ರಾಮ,ಸಖರಾಯಪಟ್ಟಣ ಹೋಬಳಿ ,
ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

(1 ನೇ ಪ್ರತಿವಾದಿ - ಮೃತರಾಗಿರುತ್ತಾರೆ)

(2 ಹಾಗೂ 3 ನೇ ಪ್ರತಿವಾದಿಯ ಪರ - ಶ್ರೀ ಕೆ.ಎ. ಶಾಂತಪ್ಪ , ವಕೀಲರು)

(4 ರಿಂದ 10 ನೇ ಪ್ರತಿವಾದಿಯರ ಪರಃ ಶ್ರೀಮತಿ. ಬಿ.ಆರ್.ರೇಷ್ಮ , ವಕೀಲರು)

ಮಧ್ಯಂತರ ಅರ್ಜಿ ಸಂಖ್ಯೆ-1 ರ ಪಕ್ಷಗಾರರು

ಅರ್ಜಿದಾರರು /
9 ನೇ ಪ್ರತಿವಾದಿ ಃ ನಾಗರಾಜ

- ವಿರುದ್ಧ -

ಎದುರುದಾರರು /
ಪ್ರತಿವಾದಿಯರು ಃ ಶ್ರೀಮತಿ ಜಯಮ್ಮ ಮತ್ತು ಇತರರು.

| | | |
|---|---|---|
| *i* | ಯಾವ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ - | ಕ್ರಮಾದೇಶ 1 ನಿಯಮ 10(6) ಸಹಕಲಂ 151 ರ ದಿವಾಣಿ ಪ್ರಕ್ರಿಯಾ ಸಂಹಿತೆ |
| *ii* | ಯಾವ ಪರಿಹಾರಕ್ಕಾಗಿಃ- | ವಾದಿಯಾಗಿ ಸ್ಥಾನಂತರಗೊಳ್ಳಲು |
| *iii* | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ- | ದಿನಾಂಕಃ 22.04.2022 |
| *iv* | ಅರ್ಜಿಯ ಸಂಖ್ಯೆಃ | 01 |
| *v* | ಅರ್ಜಿಗೆ ವಿರುದ್ಧವಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕಃ- | 1 ರಿಂದ 3 ನೇ ಪ್ರತಿವಾದಿ - ದಿನಾಂಕಃ 21.10.2022. |
| *vi* | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ- | ದಿನಾಂಕಃ 29.11.2023. |

**ಅರ್ಜಿದಾರರು / ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10 (6) ಮತ್ತು ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: 1 ರ ಮೇಲಿನ ಆದೇಶ**

ಅರ್ಜಿದಾರರು / ಪ್ರತಿವಾದಿ-9 ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10 (6) ಮತ್ತು ಸಹವರ್ತಿ ಕಲಂ 151 ರನ್ವಯ ಅರ್ಜಿಯನ್ನು ಸಲ್ಲಿಸಿ, ಅವರನ್ನು ವಾದಿಯನ್ನಾಗಿ ಸ್ಥಾನಾಂತರ ಮಾಡಬೇಕೆಂದು ಕೋರಿಕೊಂಡಿರುತ್ತಾರೆ. (ವಾದಿಯ ವಾರಸುದಾರರು ಸೇರ್ಪಡೆಗೆ ಕ್ರಮಕೈಗೊಳ್ಳಲು ನಿಗಧಿಪಡಿಸಿದ ಮುದ್ದತ್ತಿನಂದು 9 ನೇ ಪ್ರತಿವಾದಿಯು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ)

2. ಅರ್ಜಿಗೆ ಪೂರಕವಾಗಿ 9 ನೇ ಪ್ರತಿದಿವಾದಿಯು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ತನ್ನ ಪ್ರಮಾಣ ಪತ್ರದಲ್ಲಿ ವಾದಿಯು ದಿನಾಂಕ 01/02/2022 ರಂದು ದಾವೆ ಚಾಲ್ತಿಯಲ್ಲಿರುವಾಗ ಮದುವೆಯಾಗದೆ ಮರಣ ಹೊಂದಿರುತ್ತಾರೆ. ವಾದಿಯ ತಾಯಿ ಕೂಡ ದಿನಾಂಕ 26/01/2022 ರಂದು ಮರಣ ಹೊಂದಿದ್ದು ಅವರಿಗೆ ಯಾವುದೇ ವಾರಸುದಾರರು ಇದ್ದಿರುವುದಿಲ್ಲ. ಪ್ರತಿವಾದ ಪತ್ರದಲ್ಲಿ ಅವರು ಕೂಡ ವಿಭಜನೆ ಕೋರಿದ್ದು ಅವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುತ್ತದೆ. ವಾದಿಯ ಅನುಪಸ್ಥಿತಿಯಲ್ಲಿ ದಾವೆಯು ವಜಾಗೊಂಡಲ್ಲಿ ಅವರಿಗೆ ತುಂಬಲಾಗದ ನಷ್ಟವಾಗುತ್ತದೆ. ಆದ್ದರಿಂದ ಅವರಿಗೆ ವಾದಿಯಾಗಿ ಸ್ಥಾನಂತರ ಗೊಳ್ಳಲು ಎಲ್ಲಾ ಹಕ್ಕು ಇರುತ್ತದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೊಂಡಿರುತ್ತಾರೆ.

3. 1 ರಿಂದ 3 ನೇ ಪ್ರತಿವಾದಿಯವರು ತಕರಾರನ್ನು ಸಲ್ಲಿಸಿದ್ದು ತಕರಾರಿನ ಅಂಶ ಈ ಕೆಳಕಂಡಂತೆ ಇರುತ್ತದೆ.

9 ನೇ ಪ್ರತಿವಾದಿಯು ಸಲ್ಲಿಸಿದ ಅರ್ಜಿಯು ಕಾನೂನು ಮತ್ತು ವಿದ್ಯಾಮಾನಗಳ ರೀತಿ ಸಲ್ಲಿಸತಕ್ಕದ್ದಲ್ಲ. ಈಗಾಗಲೇ ವಾದಿಯ ವಿಚಾರಣೆ ನಡೆದಿದ್ದು ಪ್ರತಿವಾದಿಯ ವಿಚಾರಣೆಯು ಮುಕ್ತಾಯವಾಗಿರುತ್ತದೆ. 9 ನೇ ಪ್ರತಿವಾದಿಯನ್ನು ವಾದಿಯಾಗಿ ವರ್ಗಾವಣೆ ಮಾಡಿದರೆ ದಾವಾ ಸ್ವರೂಪ ಹಾಗೂ ವಿಷಯಗಳು ವಿಭಿನ್ನವಾಗಿರುತ್ತದೆ. ಆದ್ದರಿಂದ 9 ನೇ ಪ್ರತಿವಾದಿಯು ಸಲ್ಲಿಸಿರುವ ವರ್ಗಾವಣೆ ಅರ್ಜಿಯು ವಜಾವಾಗಲು ಯೋಗ್ಯವಾಗಿರುತ್ತದೆ. ದಾವಾ ಆಸ್ತಿಯು 1 ನೇ ಪ್ರತಿವಾದಿ ಗಂಡನ ಸ್ವಯಾರ್ಜಿತ ಆಸ್ತಿಯಾಗಿದ್ದು, ಅವರ ಗಂಡ 1 ನೇ ಪ್ರತಿವಾದಿಗೆ ನೊಂದಾಯಿತ ವಿಲ್ ಮೂಲಕ ಕೊಟ್ಟ ಆಸ್ತಿಯಾಗಿದ್ದು, 1 ರಿಂದ 4 ನೇ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ನ್ಯಾಯಾಲಯವು ನಿರ್ಧರಿಸಬೇಕಾದ ಅಂಶಗಳು ಈ ಕೆಳಗಿನಂತಿವೆಃ-

*1.* 9 ನೇ ಪ್ರತಿವಾದಿಯವರು ತಮ್ಮನ್ನು ವಾದಿಯನ್ನಾಗಿ ಸ್ಥಾನಂತರ ಗೊಳಿಸಲು ಸಕಾರಣ ಇದೆಯೆಂದು ಸಾಬೀತುಪಡಿಸಿದ್ದಾರೆಯೇ*?*

*2.* ಆದೇಶವೇನು*?*

5. ನ್ಯಾಯಾಲಯದ ಮುಂದಿರುವ ದಾಖಾಲಾತಿಗಳನ್ನು ಮತ್ತು ಕಡತವನ್ನು ಗಮನಿಸಿ ವಾದವನ್ನು ಆಲಿಸಿ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದೆಃ-

ಅಂಶ-1ಃ ಸಕಾರಾತ್ಮಕವಾಗಿಃ

ಅಂಶ-2ಃ ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದದಂತೆ.

ಕಾ ರ ಣ ಗಳು

6. ಅಂಶ-1ಃ- ದಿನಾಂಕ 01/02/2022 ರಂದು ದಾವೆ ಚಾಲ್ತಿಯಲ್ಲಿರುವಾಗ ವಾದಿಯು ಮದುವೆಯಾಗದೆ ಮರಣ ಹೊಂದಿರುತ್ತಾರೆ. ವಾದಿಯ ತಾಯಿ ಕೂಡ ದಿನಾಂಕ 26/01/2022 ರಂದು ಮರಣ ಹೊಂದಿದ್ದು ವಾದಿಗೆ ಯಾರು ಕೂಡ ವಾರಸುದಾರರು ಇದ್ದಿರುವುದಿಲ್ಲ. ಪ್ರತಿವಾದ ಪತ್ರದಲ್ಲಿ ಅವರು ಕೂಡ ವಿಭಜನೆ ಕೋರಿದ್ದು ಅವರಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇರುತ್ತದೆ. ವಾದಿಯ ಅನುಪಸ್ದಿತಿಯಲ್ಲಿ ದಾವೆಯು ವಜಾಗೊಂಡಲ್ಲಿ ಅವರಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಆದ್ದರಿಂದ ಅವರನ್ನು ವಾದಿಯಾಗಿ ಸ್ಥಾನಂತರ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

7. ಪ್ರತಿವಾದಿಯ ಪ್ರಕಾರ 9 ನೇ ಪ್ರತಿವಾದಿಯನ್ನು ವಾದಿಯನ್ನಾಗಿ ವರ್ಗಾವಣೆ ಮಾಡಿದರೆ ದಾವಾ ಸ್ವರೂಪದ ವಿಷಯಗಳು ವಿಭಿನ್ನವಾಗಿರುತ್ತದೆ, ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, 4 ರಿಂದ 9 ನೇ

ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂಬುದಾಗಿರುತ್ತದೆ. ವಾದಿಯು ಈ ದಾವೆಯನ್ನು ಪ್ರತಿವಾದಿ ವಿರುದ್ಧ ಅವರಿಗೆ ದಾವಾ ಆಸ್ತಿಯಲ್ಲಿ ವಿಭಜನೆ ಮಾಡಿ ಹಿಸ್ಸೆ ನೀಡಬೇಕೆಂದು ಮತ್ತು ದಿನಾಂಕ 26/12/2013 ರ ಕ್ರಯಪತ್ರವು ಅವರಿಗೆ ಬಂಧನಕಾರಿಯಾಗಿರುವುದಿಲ್ಲವೆಂದು ಪರಿಗಣಿಸಬೇಕೆಂದು ಕೋರಿಕೊಂಡಿರುತ್ತಾರೆ. ಈ ದಾವೆಯಲ್ಲಿ ವಾದಿಯು ಮರಣ ಹೊಂದಿದ ಕುರಿತು ಯಾವುದೇ ತಕರಾರು ಇದ್ದಿರುವುದಿಲ್ಲ. 6 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು 7 ರಿಂದ 9 ನೇ ಪ್ರತಿವಾದಿಯವರು ಆ ಪ್ರತಿವಾದ ಪತ್ರವನ್ನು ಅಳಡಿಸಿಕೊಂಡಿರುತ್ತಾರೆ. 7 ರಿಂದ 9 ನೇ ಪ್ರತಿವಾದಿಯವರು ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಯು ಅವರ ಒಟ್ಟು ಕುಟುಂಬದ ಆಸ್ತಿ ಎಂದು ಆ ದಾವೆಯಲ್ಲಿ ಅವರಿಗೆ ಹಕ್ಕು ಇದೆ ಎಂದು ಆದ್ದರಿಂದ ಅವರ ಹಿಸ್ಸೆಯನ್ನು ವಿಭಜನೆ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ವಾದಿಯು ಮರಣ ಹೊಂದಿರುವುದರಿಂದ 9 ನೇ ಪ್ರತಿವಾದಿಯನ್ನು ವಾದಿಯ ಸ್ಥಾನಕ್ಕೆ ಬದಲಾಯಿಸುವುದು ಅವಶ್ಯಕವಾಗಿರುತ್ತದೆ. ಮೇಲೆ ವಿವರಿಸಿದ ಕಾರಣದಿಂದ ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

8. ಅಂಶ-2ಃ- ವಾದಿಯು ಮರಣ ಹೊಂದಿದ್ದು, 9 ನೇ ಪ್ರತಿವಾದಿಯವರು ಅವರನ್ನು ವಾದಿಯಾಗಿ ಸ್ಥಾನಂತರಗೊಳಿಸಬೇಕೆಂದು ಕೋರಿಕೊಂಡಿದ್ದರಿಂದ ಖರ್ಚು ವಿಧಿಸುವುದು ಸೂಕ್ತವಾಗಿರುವುದಿಲ್ಲ. ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ಅರ್ಜಿದಾರರು / ಪ್ರತಿವಾದಿ 9 ಮಧ್ಯಂತರ ಅರ್ಜಿ ಸಂಖ್ಯೆ 1 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 1 ನಿಯಮ 10 (6) ಮತ್ತು ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಅಡಿಯಲ್ಲಿ ಅರ್ಜಿಯನ್ನು ಪುರಸ್ಕರಿಸಲಾಗಿದೆ.

9 ನೇ ಪ್ರತಿವಾದಿಯನ್ನು 2 ನೇ ವಾದಿಯಾಗಿ ಸ್ಥಾನಂತರ ಗೊಳಿಸಲಾಗಿದೆ.

ತಿದ್ದುಪಡಿಗಾಗಿ ಕರೆಯಿರಿ.

(ಈ ಆದೇಶವನ್ನು ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 29 ನೇ ನವೆಂಬರ್-2023 ರಂದು ಘೋಷಿಸಲಾಯಿತು)

ಸಹಿ/-
(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕಡೂರು.

Visit ecourts.gov.in for updates or download mobile app "eCourts Services" from Android or iOS